ಅಗಲೀಕರಣಗೊಳಿಸುವ ರಸ್ತೆ ಗಡಿಗೆ ಸ್ಥಳಾಂತರಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ. 85 ರಸ್ತೆಗಳ ಅಗಲೀಕರಣಕ್ಕೆ ರಸ್ತೆಯ ಇಕ್ಕೆಲಗಳಲ್ಲಿ ಭೂಮಿಯ ಅವಶ್ಯಕತೆ ಇದ್ದು ಇದಕ್ಕಾಗಿ "ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರದ (Development Rights Certificate) ಅನ್ವಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಂದಾಜು ಮೊತ್ತವನ್ನು ನಿರ್ಧರಿಸಲು ಕ್ರಮ ಕೈಗೊಳ್ಳಲಾಗುವುದು.

194 (437) ಶ್ರೀ ಬೋಪಯ್ಯ ಕೆ.ಜಿ (ಮಡಿಕೇರಿ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಮಡಿಕೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ 1) ಮಡಿಕೇರಿ–ಕಡಮಕಲ್–ಸುಬ್ರಹ್ಮಣ್ಯ ರಸ್ತೆ 2) ತೊಡಿಕಾನ–ಪಟ್ಟ–ಭಾಗಮಂಡಲ ರಸ್ತೆ ಚೆಂಬು–ದಬ್ಬಡ್ಯ–ಚೆಟ್ಟಿಮಾನಿ ರಸ್ತೆಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ;

ಆ. ಈ ರಸ್ತೆಗಳ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು; (ವಿವರ ನೀಡುವುದು)?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ. 1) ಮಡಿಕೇರಿ–ಕಡಮಕಲ್–ಸುಬ್ರಹ್ಮಣ್ಯ ರಸ್ತೆಯ ಸರಪಳಿ 13.50 ರಿಂದ 16.00 ಕಿಮೀ ವರೆಗಿನ ಅಭಿವೃದ್ಧಿಗಾಗಿ 2005–06ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ರಡಿಯಲ್ಲಿ ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ.

2) ತೊಡಿಕಾನ–ಪಟ್ಟ–ಭಾಗಮಂಡಲ ರಸ್ತೆಯು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತದೆ. ಲೋಕೋಪಯೋಗಿ ಇಲಾಖೆಯಿಂದ ಸದರಿ ರಸ್ತೆಯ ಅಭಿವೃದ್ಧಿ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

3) ಚೆಂಬು–ದಬ್ಬಡ್ಕ–ಚೆಟ್ಟಿಮಾನಿ ರಸ್ತೆಯ ಸರಪಳಿ 26.00 ರಿಂದ 30.00 ಕಿಮೀ ವರೆಗಿನ ಅಭಿವೃದ್ಧಿಗಾಗಿ 2005–06ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ಅಡಿಯಲ್ಲಿ ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ.

ಆ. ಮೇಲೆ ವಿವರಿಸಿದಂತೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.